ಆ) ಮನಗಂಡಿದೆ.

ಇ) ಕಾವೇರಿ ನೀರಾವರಿ ನಿಗಮಕ್ಕೆ ಕಾಮಗಾರಿಗಳನ್ನು ಹಸ್ತಾಂತರಿಸಲಾಗಿದೆ. ರಸ್ತೆಗಳ ನಿರ್ವಹಣೆಯನ್ನು ಕೈಗೆತ್ತಿಕೊಂಡು ರೈತರ ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ರೈತ ಬಜಾರುಗಳ ಪ್ರಾರಂಭ

4653 (5437) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತ ಬಜಾರುಗಳನ್ನು ಪ್ರಾರಂಭಿಸುವ ಕಾರ್ಯಕ್ರಮದಡಿ ಈವರೆವಿಗೆ ಕಾರ್ಯೋನ್ಮುಖವಾಗಿರುವ ರೈತ ಬಜಾರುಗಳ ಸಂಖ್ಯೆ ಎಷ್ಟು, ಇವುಗಳನ್ನು ಎಲ್ಲೆಲ್ಲಿ ಆರಂಭಿಸಲಾಗಿದೆ;

ಆ) ಈ ರೈತ ಬಜಾರುಗಳು ರೈತರಿಗೆ, ತಮ್ಮ ಉತ್ಪನ್ನಗಳನ್ನು ಮಾರುವಾಗ ಆಗುತ್ತಿದ್ದ ಶೋಷಣೆಯನ್ನು ತಪ್ಪಿಸುವ ದಿಸೆಯಲ್ಲಿ ಪರಿಣಾಮಕರವಾಗಿದೆಯೇ; ರೈತರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಮಾರುವಲ್ಲಿ ಲಾಭ ದೊರೆಕುತ್ತಿದೆಯೇ;

ಇ) ಮಂಡ್ಯ ಜಿಲ್ಲೆ ಕೃಷಿ ಪ್ರಧಾನವಾಗಿದ್ದ, ಇಲ್ಲಿ ಯಾವುದೇ ರೈತ ಬಜಾರುಗಳನ್ನು ಆರಂಭಿಸದೇ ಇರಲು ಕಾರಣವೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ರಾಜ್ಯದಲ್ಲಿ ಪ್ರಸ್ತುತ 3 ರೈತರ ಸಂತೆಗಳನ್ನು ಪ್ರಾರಂಭ ಮಾಡಲಾಗಿದ್ದು, ವಿವರ ಕೆಳಕಾಣಿಸಿದಂತಿದೆ.

1. ಬೆಂಗಳೂರು ನಗರ ಜಿಲ್ಲೆ – ಯಲಹಂಕ
2. ಧಾರವಾಡ ಜಿಲ್ಲೆ – ಹುಬ್ಬಳ್ಳಿ
3. ಚಿತ್ರದುರ್ಗ ಜಿಲ್ಲೆ – ಚಿತ್ರದುರ್ಗ

ಆ) ಹಣ್ಣು ಮತ್ತು ತರಕಾರಿ ಬೆಳೆಯುವ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಿ ಉತ್ತಮ ಧಾರಣೆ ಪಡೆಯುವ ರೈತ ಸಂತೆ ಸ್ಥಾಪನೆಯ ಉದ್ದೇಶ ಈಡೇರಿಕೆಯಲ್ಲಿ ಬಹುತೇಕ ಯಶಸ್ಸು ಸಾಧಿಸಲಾಗಿದೆ.

ಇ) ರಾಜ್ಯದಲ್ಲಿನ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ರೈತರ ಸಂತೆ ಸ್ಥಾಪಿಸುವ ಸಂಬಂಧ ಕಾರ್ಯ ಸಾಧ್ಯತೆ ವರದಿ ನೀಡಲು ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಮತ್ತು ಧಾರವಾಡ ಇವರಿಗೆ ವಹಿಸಲಾಗಿದೆ. ಸದರಿಯವರಿಂದ ಬರುವ ವರದಿ ಪರಿಶೀಲಿಸಿ, ರೈತರ ಸಂತೆ ಸ್ಥಾಪನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಧಾರವಾಡ ತಾಲ್ಲೂಕಿನಲ್ಲಿ ಸುಫಲ ಜಲಾನಯನ ಕಾರ್ಯಕ್ರಮ

4655 (5418) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಜಲ ಜಲಾನಯನ ಕಾರ್ಯಕ್ರಮ ರಾಜ್ಯದ ಯಾವ ಜಿಲ್ಲೆಗಳ ತಾಲ್ಲೂಕುಗಳ ಪ್ರದೇಶಗಳಲ್ಲಿ ಆಯ್ದುಕೊಳ್ಳಲಾಗಿದೆ (ವಿವರ ನೀಡುವುದು)

ಆ) ಧಾರವಾಡ ತಾಲ್ಲೂಕಿನ ಗ್ರಾಮಗಳಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಗಿದೆಯೆ ಮತ್ತು ರೈತ ಗುಂಪುಗಳು ನಿರ್ಮಿಸಿರುವ ಈ ಕಾರ್ಯಕ್ರಮಕ್ಕೆ ಅವರಿಗೆ ಈವರೆಗೆ ನೀಡಿರುವ ಹಣದ ವಿವರ ನೀಡುವುದು.

ಇ) ಸದರಿ ರೈತಗುಂಪುಗಳ ಪ್ರಮುಖ ಪದಾಧಿಕಾರಿಗಳು ತಮ್ಮ ಹೊಲಗಳಲ್ಲಿ ಯೋಜನೆಯ ಪ್ರಯೋಜನ ಪಡೆದಿರುವುದು ಗಮನಕ್ಕೆ ಬಂದಿದೆಯೇ? ಪ್ರತಿ ಗ್ರಾಮದ ರೈತರ ಪಾಲುಗಾರಿಕೆಯ ಭೂ ಕ್ಷೇತ್ರದಲ್ಲಿ ಯೋಜನೆಯ ಅನುಷ್ಠಾನದ ವಿವರ ನೀಡುವುದು;

ಈ) ಪ್ರತಿ ಗ್ರಾಮದ ಜಲಾನಯನಗಳಲ್ಲಿ ಹೊಂಡಗಳು ಮತ್ತು ಚಿಕ್ಕ ಬಾಂದಾರಗಳು ನಿರ್ಮಾಣಗೊಂಡ ವಿವರ ನೀಡುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):.

ಅ) ವಿಶ್ವಬ್ಯಾಂಕ್ ನೆರವಿನ ಸುಜಲ ಜಲಾನಯನ ಅಭಿವೃದ್ಧಿ ಯೋಜನೆಯನ್ನು ರಾಜ್ಯದ ತುಮಕೂರು, ಕೋಲಾರ, ಚಿತ್ರದುರ್ಗ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ 38 ತಾಲ್ಲೂಕುಗಳ 1270 ಹಳ್ಳಿಗಳಲ್ಲಿ ಮೂರು ಹಂತಗಳಲ್ಲಿ ಕಾರ್ಯಗತಗೊಳಿಸಲು ಯೋಜಿಸಲಾಗಿದ್ದು, ಮೊದಲನ ಹಂತಗಳಲ್ಲಿ 5 ಜಿಲ್ಲೆಗಳ 10 ತಾಲ್ಲೂಕುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ (ವಿವರ ಅನುಬಂದ – 1 ರಲ್ಲಿದೆ)

ಆ) ಧಾರವಾಡ ತಾಲ್ಲೂಕಿನ ಆಯ್ದ ಗ್ರಾಮಗಳಲ್ಲಿ ಈ ಕಾರ್ಯಕ್ರಮವು ಪ್ರಾರಂಭವಾಗಿದ್ದು ಇದಕ್ಕಾಗಿ ಸುಜಲಾ ಜಲಾನಯನ ಸಂಘಗಳಿಗೆ ಒಟ್ಟು 23.90 ಲಕ್ಷ ರೂ.ಗಳನ್ನು ಬಿಡುಗಡ ಮಾಡಲಾಗಿದೆ.

ಇ) ಬಂದಿದೆ. ಈ ಯೋಜನೆಯಡಿ ಕ್ರಿಯಾ ಯೋಜನೆಯ ತಯಾರಿಕೆ, ಸಮೀಕ್ಷೆ ಕಾಮಗಾರಿಗಳ ಅನುಷ್ಠಾನ ಉಸ್ತುವಾರಿ, ಫಲಾನುಭವಿಗಳಿಂದ ವಂತಿಗೆ ಸಂಗ್ರಹಣೆ ಇವುಗಳ ಜವಾಬ್ದಾರಿಯನ್ನು ಜಲಾನಯನ ಸಂಘಗಳಿಗೆ ವಹಿಸಲಾಗಿದ್ದು. ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಅಸಕ್ತ ಫಲಾನುಭವಿಗಳನ್ನು ಜಮೀನನ್ನು ಉಪಹರಿಸಲಾಗುವುದು.

ಈ) ಗ್ರಾಮವಾರು ನಿರ್ಮಾಣಗೊಂಡ ಹೊಂಡ ಮತ್ತು ಚಿಕ್ಕ ಬಾಂದಾರಗಳ ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.

ಅನುಬಂಧ – 1

ಜಿಲ್ಲೆಗಳು	ತಾಲ್ಲೂಕು	ಉಪ ಜಲಾನಯನಗಳ ಹಸರು	ಪ್ರವೇಶ (ಹೆ.)	ಹಳ್ಳಿಗಳ
ಚಿತ್ರದುರ್ಗ	ಚಿತ್ರದುರ್ಗ	ಕುನಬೇನು ಬಿ.ಆರ್.ಹಳ್ಳಿ ನಾಲಾ	7,079.00	07
		ಜೋಡಿ ಚಿಕ್ಕೇನ ಹಳ್ಳಿ ನಾಲಾ	4,646.00	04
		ಬೀರಾವರ ನಾಲಾ*	6,614.35	11
	ಚಳ್ಳಕೆರೆ	ಚನ್ನಮ್ಮನಾಗತಿಹಳ್ಳಿ*	6,540.00	09
		ಬೋಗನಹಳ್ಳಿ	7,190.00	12
	ಹೊಳಲ್ಕೆರೆ	ಹಿರೇಹಳ್ಳ	6,999.21	20
		ಗಂಗಸಮುದ್ರ**	5,411.48	11
	ಹೊಸದುರ್ಗ	ವೇದಾನದಿ ತೀರ**	5,781,34	13
		ಹರಿಹರೇಶ್ವರ ದೇವಸ್ಥಾನ	4710.70	11
	ಹಿರಿಯೂರು	ಗಾಂಧಿನಗರ	5,647.36	08
		ಸುವರ್ಣಮುಖಿ*	5,881.45	06
		ಎಂ.ಕೆ. ಕೋಟೆ	6,143.00	05

1	2	3	4	5
	ಮೊಳಕಾಲ್ಮೂರು	ಚಿನ್ನಹಗರಿ ನದಿಯ ಎಡದಂಡೆ ಕಾಲುವೆಯ ವೀರಾಪುರ	3,140.61	07
		ಚಿನ್ನಹಗರಿ ನದಿಯ ಬಲದಂಡೆ ಕಾಲುವೆಯ ಹೊಸೂರು**	12,227.23	03
ಧಾರವಾಡ	ಧಾರವಾಡ	ಮನಗುಂಡಿ*	5,090.00	08
		ಅಂಬಲಿಕೊಪ್ಪ	6,869.00	13
	ಹುಬ್ಬಳ್ಳಿ	ಉಣಕಲ್	3,616.00	05
		ದೇವರಗುಡಿಹಾಳ್	3,134.00	10
		ಕುಂಡಿಕೆರೆ**	4,643.00	12
	ಕಲಘಟಗಿ	ಹಾಲಿಕೊಪ್ಪ*	4,024.00	12
	ಕುಂದಗೋಳ	ಗುಡಿಹಳ್ಳ**	6,076.00	07
		ಬೆನ್ನಿಹಳ್ಳ	6,356.00	05
	ನವಲಗಾಂದ	ಯರನಾಳ**	5,205.00	07
ಹಾವೇರಿ	ಹಾವೇರಿ	ಕನಕಾಪುರ	5,218.00	09
		ಗುತ್ತಲ್*	3,778.00	04
	ಸವಣೂರು	ಮನ್ನಗಿ	5,185.00	11
		ಮೇಲ್‌ಗಟ್ಟಿ	5,205.00	07
		ಹೊಸ ನೀರಲಗಿ**	5,075.00	07
	ಶಿಗ್ಗಾಂವ್	ಚಿಕ್ಕನಲ್ಲೂರು**	4,948.00	08
		ಗುಡಚನ್ನಾಪುರ	4,696.00	14
	ರಾಣೆಬೆನ್ನೂರು	ಇಟಗಿ*	4,636.00	08
		ಕೋಣನತಂಬಿಗೆ	5,002.00	05
	ಬ್ಯಾಡಗಿ	ಕಲದೇವರ**	4,985.00	05
		ಸಂಕಾರೀಪುರ	4,050.00	11
	ಹಿರೆ ಕೆರೂರು	ಕಣವಿಸಿದ್ದಗೇರಿ	4,670.00	12
		ದೊಡ್ಡಗುಬ್ಬಿ**	5,090.00	10
ಕೋಲಾರ	ಕೋಲಾರ	ಪಾಲಾರ್ ನದಿ ಬಲದಂಡೆ	4,575.52	20
		ಪಾಲರ್ ನದಿ ಎಡ ದಂಡೆ	6,371.86	43
	ಮಾಲೂರು	ಮಾಸ್ತಿ ದೊಡ್ಡಕೆರೆ**	4,999.11	36
		ಹುಲದೇನಹಳ್ಳಿ ಅಮಾನಿ ಅರಸೀಕೆರೆ	5,604.55	63
	ಬಂಗಾರುಪೇಟೆ	ಮುಸ್ತರಹಳ್ಳಿನಾಲಾ	5,736.78	20
		ಮಾರ್ಕಂಡಹಳ್ಳ**	5,224.04	32

1	2	3	4	5
	ಚಿಂತಾಮಣಿ	ಮಿಂದಿಗಲ್ ಒಡ್ಡು	5,188.00	43
		ಪಾಪಾಗ್ನಿ ನದಿ	5,023.00	14
	ಶಿಡ್ಲಘಟ್ಟ	ಶೆಟ್ಟಿಹಳ್ಳಿ	6,429.00	21
		ಶೀಗೇ ಹಳ್ಳಿ	6,850.00	29
	ಚಿಕ್ಕಬಳ್ಳಾಪುರ	ಗೌಡನಹಳ್ಳಿಕೆರೆ	5,034.95	25
		ಕನಿತಹಳ್ಳಿಕೆರೆ	5,319.71	32
	ಗುಂಡಿಬಂಡೆ	ಚಂದೂರು ಕೆರೆ ಕೋಡಿ ಹಳ್ಳ*	5,041.49	32
		ಕುಶವತಿ ನದಿ	4,978.28	19
	ಗೌರಿಬಿದನೂರು	ಕುಮದವತಿ ನದಿ ಎಡದಂಡೆ*	5,114.00	15
		ಕಚಮಾಚನಹಳ್ಳಿ ಕೆರೆ	5,273.00	18
	ಬಾಗೇಪಲ್ಲಿ	ಲಕ್ಕಸಂದ್ರ**	5,018.85	13

ಅನುಬಂಧ – 2

ಗ್ರಾಮವಾರು ಅನುಷ್ಠಾನಗೊಳಿಸಿರುವ ಕೃಷಿಹೊಂಡಗಳ ವಿವರ

ಜಿಲ್ಲೆ	ತಾಲ್ಲೂಕು	ಗ್ರಾಮದ ಹೆಸರು	ಕೃಷಿ ಹೊಂಡಗಳ ಸಂಖ್ಯೆ	ಷರಾ
ಧಾರವಾಡ	ಧಾರವಾಡ	ಬೆನಕನ ಕಟ್ಟೆ	02	ಪೂರ್ಣಗೊಂಡಿದೆ
		ನುಗ್ಗಿಕೆರೆ	01	ಪೂರ್ಣಗೊಂಡಿದೆ
		ನುಗ್ಗಿಕೆರೆ	01	ಪ್ರಗತಿಯಲ್ಲಿದೆ
		ಮನಸೂರ	02	ಪ್ರಗತಿಯಲ್ಲಿದೆ
		ಬೆನಕನಕಟ್ಟೆ	06	ಪ್ರಗತಿಯಲ್ಲಿದೆ
		ಮನಗುಂಡಿ	01	ಪ್ರಗತಿಯಲ್ಲಿದೆ
		ಒಟ್ಟು	13	ಪ್ರಗತಿಯಲ್ಲಿದೆ
		ವಂದಮಾನ ನದಿ ಎಡದಂಡೆ	5,684.85	12
	ಮುಳಬಾಗಲು	ಮುಷ್ಟೂರು ಕೆರೆ	6,197.44	33
		ಉತ್ತನೂರು ಕೆರೆ*	6,812.51	26
	ಶ್ರೀನಿವಾಸಪುರ	ನೀಲತೊರೆ	5,097.04	17
		ಬುರಾಕಾಯಾಲಾ ಕೊಟಾ**	5,622.50	20
ತುಮಕೂರು	ತಿಪಟೂರು	ಬಿದರಕಟ್ಟೆಹಳ್ಳ*	6,050.00	14
		ಚಿಕ್ಕಹೊನ್ನವಳ್ಳಿ ಕೆರೆ	6,015.00	17
	ಕುಣಿಗಲ್	ಯಲಿಯೂರು ಕೆರೆ	5,919.05	27
		ದೀಪಾಂಬುದಿ ಕೆರೆ**	6,121.81	17
		ಮುತ್ತುರಾಯನಕೆರೆ	6,029.81	18

1	2	3	4	5
	ಶಿರಾ	ದೇವರತೊರೆಹಳ್ಳ*	4,382.00	14
		ಚನ್ನಗಾವಹ ಕೋಡಿಹಳ್ಳಿಕೆರೆ	5,838.00	07
	ಗುಬ್ಬಿ	ಕಾಲಿಂಗನಹಳ್ಳಿ ಹಳ್ಳ**	6,228.73	12
		ನಿಟ್ಟೂರು ಕೆರೆ ಹಳ್ಳ	6,447.01	21
	ಚಿಕ್ಕನಾಯಕನ ಹಳ್ಳಿ	ಕಂದಿಕೆರೆ ಹಳ್ಳ	6,659.00	18
		ಬೋರನಕಣಿವೆ ಬಿ.	7,051.00	21
	ಪಾವಗಡ.	ಗುಮ್ಮಘಟ್ಟಕೆರೆ	3,574.00	04
		ಜಲೋಡು ಕೆರೆ**	3,421.00	05
	ಮಧುಗಿರಿ	ಸಿದ್ದರಗಲ್ಲಿಹಳ್ಳ	7,180.14	39
		ಜರಮಂಗಲಿ ಹಳ್ಳ**	3,432.70	16
	ತುರವೇಕೆರೆ	ಸರಗೆಹಳ್ಳಿ ಕೆರೆ	5,758.68	24
	ಕೊರಟಗೆರೆ	ಕೆಂಗನಪಾಳ್ಯ ಹಳ್ಳ	7,187.04	30
	ತುಮಕೂರು	ನಾಗವಳ್ಳಿ ಕೆರೆ	5,992.42	29
		ಹೆಬ್ಬಕ ಕೆರೆ	6,711.98	42
	ಒಟ್ಟು 38	77	426,968.58	1270

* ಈ 10 ಉಪ ಜಲಾನಯಾನಗಳನ್ನು ಯೋಜನೆಯ ಮೊದಲನೆಯ ಹಂತದಲ್ಲಿ ಕಾರ್ಯಗತ ಗೊಳಿಸಲು ಆಯ್ಕೆ ಮಾಡಲಾಗಿದೆ.

** ಈ 20 ಉಪ ಜಲಾನಯನಗಳನ್ನು ಯೋಜನೆಯ ಎರಡನೆಯ ಹಂತದಲ್ಲಿ ಕಾರ್ಯಗತ ಗೊಳಿಸಲು ಆಯ್ಕೆ ಮಾಡಲಾಗಿದೆ.

ಕೃಷಿ ಹುಟ್ಟುವಳಿಗಳ ಮೂಲಕ ರೈತರಿಗೆ ಲಾಭದಾಯಕ ಯೋಜನೆಗಳು

4656 (5419) : ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ ಮಾನ್ಯ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ರೈತರ ಎಲ್ಲಾ ಪ್ರಮುಖ ಬೆಳೆಗಳ ಸಂಸ್ಕರಣೆ, ಸಂಗ್ರಹದ ಉಗ್ರಾಣ ಮತ್ತು ಶೀತಾಗಾರಗಳ ಸೌಲಭ್ಯ ಕಲ್ಪಿಸಿರುವ ವಿವರ ನೀಡುವುದು;

ಆ) ಹುಟ್ಟುವಳಿಗಳು ಮಾರುಕಟ್ಟೆಗೆ ಬರುವುದರಿಂದಲೇ ರೈತರಿಗೆ ಲಾಭವಾಗುವ ಕಾರ್ಯಗಳ ಅನುಷ್ಠಾನ ಮಾಡುವ ಯೋಜನೆಗಳು ಇವೆಯೆ; ವಿವರ ನೀಡುವುದು?

ಇ) ಪ್ರತಿ ಹುಟ್ಟುವಳಿಗಳ ಗುಣಮಟ್ಟದ ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಮಾಡುವ ಮಾದರಿಯ ಮಾರುಕಟ್ಟೆಗಳ ನಿರ್ಮಾಣದ ಯೋಜನೆ ಇದೆಯೆ? ವಿವರ ನೀಡುವುದು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ವಿವರ ಅನುಬಂಧದಲ್ಲಿ ನೀಡಿದೆ.

ಆ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ 1966ರ ಪ್ರಕರಣ–8ರ ಮೇರೆಗೆ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಧಿಸೂಚಿತ ಹುಟ್ಟುವಳಿಗಳ ಸಗಟು ವಹಿವಾಟು